**KARNATAK UNIVERSITY, DHARWAD**
*NAAC Accredited with "A" Grade 2022*
"University with Potential for Excellence"

Azadi Ka Amrit Mahotsav

ವಿದ್ಯಾರ್ಥಿ ಕಲ್ಯಾಣ ವಿಭಾಗ
**Students Welfare Section**

Ph.No.(O) 08362215216 / 2215200
Email: directorswkud@gmail.com

Ref: KU/DSW/2023-24/82

Date:23-08-2023

## ಸುತ್ತೋಲೆ

ವಿಷಯ: ಎಲ್ಲ ವಿಭಾಗದ ವಿದ್ಯಾರ್ಥಿಗಳು ಗುರುತಿನ ಚೀಟಿ ಪಡೆದುಕೊಳ್ಳುವ ಕುರಿತು
ಉಲ್ಲೇಖ: ಮಾನ್ಯ ಕುಲಪತಿಗಳ ಆದೇಶ ದಿನಾಂಕ: 23–08–2023

ಮಾನ್ಯ ಕುಲಪತಿಗಳ ಆದೇಶ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ ಈಗಾಗಲೇ ವಿವಿಧ ವಿಭಾಗಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿ ಕಲ್ಯಾಣ ವಿಭಾಗದಿಂದ ಗುರುತಿನ ಚೀಟಿಯನ್ನು ಪಡೆಯಬೇಕು. ಯಾವ ವಿಭಾಗದ ವಿದ್ಯಾರ್ಥಿಗಳು ಗುರುತಿನ ಚೀಟಿಯನ್ನು ಪಡೆದುಕೊಂಡಿಲ್ಲವೋ ಅಂತಹ ವಿಭಾಗಗಳ ಮುಖ್ಯಸ್ಥರುಗಳು ಗುರುತಿನ ಚೀಟಿಯನ್ನು ವಿದ್ಯಾರ್ಥಿಗಳಿಗೆ ತುರ್ತಾಗಿ ಪೂರೈಸಲು ವ್ಯವಸ್ಥೆಯನ್ನು ಕಲ್ಪಿಸಬೇಕು.

ಮುಂದುವರೆದು, ಕವಿವಿ ಆವರಣದಲ್ಲಿ ಕೆಲವು ರಾತ್ರಿ ಸಮಯದಲ್ಲಿ ಅಹಿತಕರ ಘಟನೆಗಳು ಜರುಗುತ್ತಿದ್ದು ಅಂತಹ ಘಟನೆಗಳನ್ನು ತಡೆಯಲು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಗುರುತಿನ ಚೀಟಿಯನ್ನು ನೀಡುವುದು ಅವಶ್ಯವಿರುತ್ತದೆ. ಆದ್ದರಿಂದ ಎಲ್ಲ ವಿಭಾಗದ ವಿದ್ಯಾರ್ಥಿಗಳ ಗಮನಕ್ಕೆ ಈ ಸುತ್ತೋಲೆಯನ್ನು ತರಲು ತಿಳಿಸಲಾಗಿದೆ. ವಸತಿನಿಲಯದಲ್ಲಿ ವಾಸವಿರುವ ವಿದ್ಯಾರ್ಥಿಗಳು ಯಾವುದೇ ಅಧಿಕಾರಿಗಳು/ಸಿಬ್ಬಂದಿಗಳು ಗುರುತಿನ ಚೀಟಿಯನ್ನು ಕೇಳಿದಲ್ಲಿ ವಿದ್ಯಾರ್ಥಿಗಳು ವಿಭಾಗದ ಗುರುತಿನ ಚೀಟಿಯನ್ನು ಪ್ರಸ್ತುತಪಡಿಸಲು ತಿಳಿಸಲಾಗಿದೆ.

For Circulation

23/8/23
ನಿರ್ದೇಶಕರು
ವಿದ್ಯಾರ್ಥಿ ಕಲ್ಯಾಣ ವಿಭಾಗ

ಗೆ,
1. ಕವಿವಿಯ ಅಧೀನದ ಎಲ್ಲ ವಿಭಾಗದ ಮುಖ್ಯಸ್ಥರುಗಳು, ಸಂಯೋಜಕರುಗಳು, ನಿರ್ದೇಶಕರು ಹಾಗೂ ಆಡಳಿತಾಧಿಕಾರಿಗಳು
2. ಪ್ರಾಚಾರ್ಯರು, ಕರ್ನಾಟಕ ಕಲಾ ಮತ್ತು ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ
3. ಎಲ್ಲ ಪುರುಷ/ಮಹಿಳಾ ವಸತಿನಿಲಯಗಳ ನಿಲಯಪಾಲಕರುಗಳು

ಪ್ರತಿ ಮಾಹಿತಿಗಾಗಿ
1. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕವಿವಿ, ಧಾರವಾಡ
2. ಮಾನ್ಯ ಕುಲಸಚಿವರ ಆಪ್ತಕಾರ್ಯದರ್ಶಿಗಳು, ಕವಿವಿ, ಧಾರವಾಡ

AOS

Principal